# ವಚನ ಸಾಹಿತ್ಯಕ್ಕೆ ಮಹಿಳಾ ವಚನಕಾರರ ಕೊಡುಗೆ

**ಶಿವಾನಂದ ಕೊರವರ***

**DOI: https://doi.org/10.5281/zenodo.21438591**

**ABSTRACT**

ಹನ್ನೆರಡನೆಯ ಶತಮಾನದ ಶರಣ ಚಳುವಳಿಯು ಕನ್ನಡ ಸಾಹಿತ್ಯಕ್ಕೆ ನೀಡಿದ ಅಪೂರ್ವ ಕೊಡುಗೆಯೇ ವಚನ ಸಾಹಿತ್ಯ. ಅಂದಿನ ಪುರುಷಪ್ರಧಾನ ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿದ್ದ ಮಹಿಳೆಯರು ಸ್ವತಂತ್ರವಾಗಿ ತಮ್ಮ ಅಭಿವ್ಯಕ್ತಿಯನ್ನು ತೋರಲು ಈ ಸಾಹಿತ್ಯ ಪ್ರಕಾರವು ಭದ್ರ ವೇದಿಕೆಯೊದಗಿಸಿತು. ಅಕ್ಕಮಹಾದೇವಿ, ಮುಕ್ತಾಯಕ್ಕ, ನೀಲಮ್ಮ, ಆಯ್ದಕ್ಕಿ ಲಕ್ಕಮ್ಮ, ಅಮುಗೆ ರಾಯಮ್ಮ ಮುಂತಾದ ಶಿವಶರಣೆಯರು ಭಕ್ತಿ, ಕಾಯಕ, ದಾಸೋಹ ಮತ್ತು ಜೀವನ ಮೌಲ್ಯಗಳನ್ನು ತಮ್ಮ ವಚನಗಳ ಮೂಲಕ ಅತ್ಯಂತ ನಿಷ್ಠುರವಾಗಿ ಹಾಗೂ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಸಮಾಜದಲ್ಲಿದ್ದ ಡಾಂಭಿಕ ಭಕ್ತಿ ಹಾಗೂ ಮೌಢ್ಯಗಳನ್ನು ಖಂಡಿಸಿ, ಸಮಾನತೆ ಹಾಗೂ ಸ್ತ್ರೀ ಸ್ವಾತಂತ್ರ್ಯವನ್ನು ಸ್ಥಾಪಿಸುವಲ್ಲಿ ಇವರ ಕೊಡುಗೆ ಅನನ್ಯವಾದುದು. ಜಗತ್ತಿನ ಸಾಹಿತ್ಯ ಚರಿತ್ರೆಯಲ್ಲಿಯೇ ಮಹಿಳೆಯರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಾಹಿತ್ಯ ಕೃಷಿ ಮಾಡಿರುವ ಹಾಗೂ ಕ್ರಾಂತಿಯಲ್ಲಿ ಪಾಲ್ಗೊಂಡಿರುವ ಈ ಕಾಲಘಟ್ಟವು ಮಹಿಳಾ ಸಬಲೀಕರಣದ ಮತ್ತು ಅಧ್ಯಾತ್ಮದ ಸುವರ್ಣಯುಗವೆಂದು ಪರಿಗಣಿಸಲ್ಪಟ್ಟಿದೆ.

**KEYWORDS:** ವಚನ ಸಾಹಿತ್ಯ, ಶಿವಶರಣೆಯರು, ಸ್ತ್ರೀ ಸ್ವಾತಂತ್ರ್ಯ, ಶರಣ ಚಳುವಳಿ, ಕಾಯಕ ಮತ್ತು ದಾಸೋಹ.

* **ಪ್ರೊ. ಶಿವಾನಂದ ಕೊರವರ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಸ್. ಎಸ್. ಕಲಾ, ವಾಣಿಜ್ಯ, ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ.

ವಿಶ್ವದಲ್ಲಿಯೇ ಸುಸಂಸ್ಕೃತವಾದ ಸಂಸ್ಕೃತಿಯನ್ನು ಹಾಗೂ ಪರಂಪರೆಯನ್ನು ಹೊಂದಿರುವ ಭಾರತವು ಅತ್ಯಂತ ಧಾರ್ಮಿಕ ವೈವಿಧ್ಯತೆಯುಳ್ಳ ದೇಶವಾಗಿದೆ. ಪುರಾತನ ಇತಿಹಾಸ, ಅನನ್ಯವಾದ ಭೌಗೋಳಿಕ ರಚನೆ, ವೈವಿಧ್ಯಮಯ ಜನ ಸಮುದಾಯ, ವಿಭಿನ್ನ ಸಂಪ್ರದಾಯಗಳು ಮತ್ತು ಆಚರಣೆಗಳನ್ನು ಹೊಂದಿರುವ ನಮ್ಮ ಭಾರತ ದೇಶವು ಜಗತ್ತಿನಲ್ಲಿಯೇ ಶ್ರೇಷ್ಠವಾಗಿದೆ. ಅದರಂತೆಯೆ ನಮ್ಮ ಕರುನಾಡ ಸಂಸ್ಕೃತಿಯೂ, ಪರಂಪರೆಯೂ ಇಡೀ ದೇಶದಲ್ಲಿ ಹಾಗೂ ಜಗತ್ತಿನಲ್ಲಿ ಪಸರಿಸಿಕೊಂಡಿದೆ. ಸಂಸ್ಕೃತಿ, ಪರಂಪರೆ, ಜನಪದ, ವಾಸ್ತುಶಿಲ್ಪ, ಸಂಗೀತ, ನೃತ್ಯ, ಕಲೆ ಸಾಹಿತ್ಯಗಳ ಸಾಧನೆ ಈ ಎಲ್ಲ ಅಂಶಗಳಲ್ಲಿಯೂ ಕರ್ನಾಟಕದ ವೈಶಿಷ್ಟ್ಯವನ್ನು ಗುರುತಿಸಬಹುದು.

ಕರುನಾಡ ನೆಲವು ಋಷಿಮುನಿಗಳು, ಶಿವಶರಣರು, ದಾಸ ಶ್ರೇಷ್ಠರು, ಕವಿ ಪುಂಗವರು, ಸಂಗೀತಗಾರರು, ಶಿಲ್ಪಿಗಳು, ಕಲಾವಿದರು ಹಾಗೂ ರಾಜಮಹಾರಾಜರು ನೆಲೆಸಿದ ನಾಡಾಗಿದೆ. ಅದರಲ್ಲಿಯೂ ಸಾಹಿತ್ಯ ಪರಂಪರೆಯಂತೂ ಅತ್ಯಂತ ಶ್ರೀಮಂತಿಕೆಯಿಂದ ಕೂಡಿದೆ. ಕನ್ನಡ ಭಾಷೆಯ ವಚನ ಸಾಹಿತ್ಯ ಪ್ರಕಾರವಂತೂ ಇಡೀ ಜಗತ್ತಿನ ಗಮನವನ್ನು ಸೆಳೆದಿದೆ. ಏಕೆಂದರೆ ಇಂತಹ ಅದ್ಭುತವಾದ ವಚನ ಸಾಹಿತ್ಯ ಇನ್ನಾವ ಭಾಷೆಗಳಲ್ಲಿಯೂ ಮೂಡಿ ಬಂದಿಲ್ಲ. ಹಾಗಾಗಿ ಕರ್ನಾಟಕದ ಶಿವಶರಣರು ಶಿವಶರಣೆಯರೂ 11ನೇ ಶತಮಾನದಲ್ಲಿ ವಚನ ಸಾಹಿತ್ಯ ಹುಟ್ಟು ಹಾಕಿ ಹುಲುಸಾದ ಬೆಳೆಯನ್ನು ಸಾಹಿತ್ಯ ಕೃಷಿಯಲ್ಲಿ ತೆಗೆದುಕೊಂಡರು. 11–12ನೇ ಶತಮಾನದಲ್ಲಿ ಉದಯಿಸಿ ಶ್ರೇಷ್ಠವಾದ ಅಂಶಗಳನ್ನು ಮಾನವನ ಜೀವನಕ್ಕೆ ಕೊಟ್ಟಿರುವ ವಚನ ಸಾಹಿತ್ಯವು ಇವತ್ತಿನ 21ನೇ ಶತಮಾನಕ್ಕೂ ಪ್ರಸ್ತುತವೆನಿಸಿದೆ. ವಚನ ಸಾಹಿತ್ಯದಲ್ಲಿ ಮೂಡಿ ಬಂದಿರುವ ಎಲ್ಲಾ ತರಹದ ಮೌಲ್ಯಗಳು ಹಿಂದಿನ ಕಾಲಕ್ಕೂ, ಇಂದಿನ ಕಾಲಕ್ಕೂ, ಮತ್ತು ಮುಂದಿನ ಕಾಲಕ್ಕೂ ಸಹಿತ ಅಷ್ಟೇ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಹೋಗುತ್ತವೆ. ವಚನ ಸಾಹಿತ್ಯವನ್ನು ಧರ್ಮ ಜಾತಿಗಳ ಭೇದವಿಲ್ಲದೆ ಎಲ್ಲಾ ಧರ್ಮ ಜಾತಿಯ ಶಿವಶರಣರು ಶಿವಶರಣೆಯರು ರಚಿಸಿದರು.

ಕರ್ನಾಟಕದಲ್ಲಿ 11–12ನೇ ಶತಮಾನವೆಂದರೆ ಅದು ಶಿವಶರಣರ ಚಳುವಳಿಯಾಗಿತ್ತು. ಸಮಾಜದಲ್ಲಿ ಸಮಾನತೆಗಾಗಿ ಎಲ್ಲರ ಒಳತಿಗಾಗಿ, ಎಲ್ಲರ ಏಳಿಗೆಗಾಗಿ, ಆತ್ಮವಿಮರ್ಶೆಗಾಗಿ, ಸಾಮಾಜಿಕ ಬದಲಾವಣೆಗಾಗಿ, ರಾಜಕೀಯ, ಧಾರ್ಮಿಕ ಬದಲಾವಣೆಗಾಗಿ, ಆರ್ಥಿಕ ಬದಲಾವಣೆಗಾಗಿ, ಜಾತಿ ನಿರ್ಮೂಲನೆಗಾಗಿ ಸ್ತ್ರೀಯರ ಸ್ವಾತಂತ್ರ್ಯಕ್ಕಾಗಿ ಮತ್ತು ಮೂಢನಂಬಿಕೆ ಗೊಡ್ಡು ಸಂಪ್ರದಾಯಗಳನ್ನು ಹೋಗಲಾಡಿಸುವುದಕ್ಕಾಗಿ ಶಿವಶರಣ ಶಿವಶರಣೆಯರ ಹೋರಾಟ ಕ್ರಾಂತಿಯುತವಾಗಿತ್ತು. ಇವೆಲ್ಲವುಗಳಿಗೆ ಬೇಕಾದ ವಿಷಯಗಳನ್ನು ವಚನ ಸಾಹಿತ್ಯದಲ್ಲಿ ತಿಳಿಸುತ್ತಾ ಜನರ ಹೃದಯಕ್ಕೆ ತಲುಪುವಂತೆ ಮಾಡಿದರು. ಅವತ್ತಿನ ಕಾಲದಲ್ಲಿ ಹಳಗನ್ನಡ ಸಾಹಿತ್ಯ ಸಾಮಾನ್ಯ ಜನರಿಗೆ ತಲೆಗೆ ಹತ್ತುವುದು ಸಾಧ್ಯವಾಗಿರಲಿಲ್ಲ. ಅದನ್ನು ಮನಗಂಡು ಶರಣರು ಸರಳವಾದ ಭಾಷೆಯಲ್ಲಿ ವಚನಗಳನ್ನು ರಚಿಸಿದರು. ವಚನಗಳು ಹಾಡಿದರೆ ಪದ್ಯವಾಗುವ ಓದಿದರೆ ಗದ್ಯವಾಗುವ ಪ್ರಕಾರವಾಗಿ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ಅದ್ಭುತ ಸಾಹಿತ್ಯವಾಗಿ ಮೂಡಿ ಬಂದಿತು. ವಚನ ಸಾಹಿತ್ಯಕ್ಕೆ ಅವತ್ತಿನ ಕಾಲದಿಂದ ಹಿಡಿದು ಇಂದಿನ ಕಾಲದಲ್ಲಿಯೂ ಜನರು ಮಾರು ಹೋಗಿದ್ದಾರೆಂದರೆ ಅದಕ್ಕೆ ಕಾರಣ ವಚನಗಳಲ್ಲಿಯ ಸರಳ ಭಾಷೆ, ಜೀವನ ಮೌಲ್ಯಗಳು, ಭಕ್ತಿ ಮತ್ತು ಆಧ್ಯಾತ್ಮಿಕ ಚಿಂತನೆಗಳು, ಕಾಯಕ ಮತ್ತು ದಾಸೋಹದ ವಿಚಾರಗಳು ಮತ್ತು ಮೋಕ್ಷ ಸಾಧನೆಯ ವಿಚಾರಗಳೇ ಕಾರಣ ಎನ್ನಬಹುದು. ಹಿಂದಿನ ಸಾಹಿತ್ಯಕ್ಕಿಂತ ಸಂಪೂರ್ಣಭಿನ್ನವಾಗಿ ಜನ ಸಾಮಾನ್ಯರ ನೋವು ನಲಿವುಗಳಿಗೆ ಸ್ಪಂದಿಸುವ ನುಡಿಗಟ್ಟುಗಳನ್ನು ಶಿವಶರಣರು ಹಾಗೂ ಶಿವಶರಣೆಯರು

ರಚಿಸಿದರು.

ಕನ್ನಡ ವಚನ ಸಾಹಿತ್ಯಕ್ಕೆ ಶಿವಶರಣರು ಕೊಟ್ಟ ಕೊಡುಗೆಯಂತೆಯೇ ಶಿವಶರಣೆಯರೂ ಸಹಿತ ವಚನಗಳನ್ನು ರಚಿಸಿ ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ನನ್ನ ಲೇಖನವು ವಚನ ಸಾಹಿತ್ಯಕ್ಕೆ ಮಹಿಳಾ ವಚನಕಾರರ ಕೊಡುಗೆ ಎಂಬುದರಲ್ಲಿ ಕೆಲವು ಮಹಿಳಾ ವಚನಕಾರರು ರಚಿಸಿದ ವಚನಗಳ ವಿಚಾರಗಳನ್ನು ಇಲ್ಲಿ ಪ್ರಸ್ತುತಪಡಿಸಿದ್ದೇನೆ.

ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಜೇಡರ ದಾಸಿಮಯ್ಯ, ಅಲ್ಲಮಪ್ರಭುಗಳು, ಬಸವಣ್ಣನವರು, ಚೆನ್ನಬಸವಣ್ಣನವರು, ಸಿದ್ದರಾಮರು, ಸಕಲೇಶ ಮಾದರಸರು, ಅಂಬಿಗರ ಚೌಡಯ್ಯ, ಉರಿಲಿಂಗ ದೇವರು, ಆಯ್ದಕ್ಕಿ ಮಾರಯ್ಯ, ಹಡಪದ ಅಪ್ಪಣ್ಣ, ಡಕ್ಕೆಯ ಬೊಮ್ಮಣ್ಣ, ನುಲಿಯ ಚಂದಯ್ಯ, ಮಾದಾರ ಚೆನ್ನಯ್ಯ ಹೀಗೆ ಇನ್ನೂ ಮುಂತಾದವರನ್ನು ನಾವು ನೋಡಬಹುದು.

ಅದೇ ರೀತಿಯಲ್ಲಿ ಶಿವಶರಣೆಯರನ್ನು ನೋಡುವುದಾದರೆ ಅಕ್ಕಮಹಾದೇವಿ, ಮುಕ್ತಾಯಕ್ಕ, ನೀಲಮ್ಮ, ಲಿಂಗಮ್ಮ, ಅಮುಗೆ ರಾಯಮ್ಮ, ಮೋಳಿಗೆ ಮಹಾದೇವಿಯಮ್ಮ, ಸತ್ಯಕ್ಕ, ಅಕ್ಕನಾಗಮ್ಮ, ಆಯ್ದಕ್ಕಿ ಲಕ್ಕಮ್ಮ, ಗೊಗ್ಗವ್ವೆ, ಸೂಳೆ ಸಂಕವ್ವೆ, ಅಕ್ಕಮ್ಮ, ಕಾಳವ್ವೆ, ಕದಿರ ರೆಮ್ಮವ್ವೆ ಹೀಗೆ ಇನ್ನೂ ಅನೇಕ ಮಹಿಳಾ ವಚನಕಾರರನ್ನು ನೋಡಬಹುದು.

ಈ ಮೇಲೆ ತಿಳಿಸಿದ ಎಲ್ಲ ಅಂಶಗಳನ್ನು ವಚನ ಸಾಹಿತ್ಯದಲ್ಲಿ ತಿಳಿಸುತ್ತಾ ಮಹಿಳಾ ವಚನಕಾರರು ಪುರುಷ ಪ್ರಧಾನ ವ್ಯವಸ್ಥೆಯ ಅಡಿಯೊಳಗೆ ಬದುಕನ್ನು ನೂಕುತ್ತಾ ಬಂದಿರುವ ಮಹಿಳೆಯರು ವಚನ ಸಾಹಿತ್ಯದ ಸಂದರ್ಭದಲ್ಲಿ ಸ್ವತಂತ್ರವಾಗಿ ಸಮಾಜದ ಬೆಳಕಿಗೆ ಬರಲು ಸಾಧ್ಯವಾಯಿತು. ಯಾವ ಜಾತಿ ಧರ್ಮಗಳೆನ್ನದೆ ವಚನ ಸಾಹಿತ್ಯದಲ್ಲಿ ಮಹಿಳಾ ವಚನಕಾರರನ್ನು ನೋಡಬಹುದು. ಮಹಿಳಾ ವಚನಕಾರರಲ್ಲಿ ಕೆಲವರನ್ನು ನಾನಿಲ್ಲಿ ಅಧ್ಯಯನಕ್ಕೆ ಅವರ ವಚನಗಳ ಮೂಲಕ ತಿಳಿಸಿದ್ದೇನೆ.

**ಚಿಲಿಪಿಲಿ ಎಂದೋಡುವ ಗಿಳಿಗಳಿರಾ।**
**ನೀವು ಕಾಣಿರೇ? ನೀವು ಕಾಣಿರೇ?**
**ಸರೋವರದೊಳಗಾಡುವ ಹಂಸೆಗಳಿರಾ।**
**ನೀವು ಕಾಣಿರೆ? ನೀವು ಕಾಣಿರೇ?**
**ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ।**
**ನೀವು ಕಾಣಿರೇ? ನೀವು ಕಾಣಿರೇ?**
**ಎರಗಿ ಬಂದಾಡುವ ತುಂಬಿಗಳಿರಾ!**
**ನೀವು ಕಾಣಿರೇ? ನೀವು ಕಾಣಿರೇ?**
**ಗಿರಿಗಹ್ವರದೊಳಗಾಡುವ ನವಿಲುಗಳಿರಾ!**
**ನೀವು ಕಾಣಿರೇ? ನೀವು ಕಾಣಿರೇ?**
**ಚೆನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದ**
**ಬಲ್ಲಡೆ ನೀವು ಹೇಳಿರೇ!**

**–ಅಕ್ಕಮಹಾದೇವಿ**

ಈ ವಚನದಲ್ಲಿ ಹರನ ಮೇಲೆ ಭಕ್ತಿಯಿರುವುದನ್ನು ತಿಳಿಸುತ್ತದೆ. ವಚನ ಸಾಹಿತ್ಯವು ಭಕ್ತಿಯ ಕುರಿತು ಹಲವಾರು ವಿಚಾರಗಳನ್ನು ತಿಳಿಸುತ್ತದೆ. ಅದೇ ರೀತಿಯಾಗಿ ಅಕ್ಕಮಹಾದೇವಿ ತನ್ನ ಸಾಂಸಾರಿಕ ಬಂಧನದಿಂದ ಹೊರಬಂದು ಚೆನ್ನಮಲ್ಲಿಕಾರ್ಜುನ ಹರನೇ ನನ್ನ ಗಂಡನು,

ಅವನೇ ನನ್ನ ಸರ್ವಸ್ವ ಎಂದು ಆ ಹರನನ್ನು ಭಕ್ತಿಯಿಂದ ದಟ್ಟಡವಿಯಲ್ಲಿ ಹುಡುಕಲು ಹೋದಾಗ ಅಲ್ಲಿರುವ ಮೂಕ ಪಶು, ಪಕ್ಷಿ, ಪ್ರಾಣಿಗಳನ್ನು ಈ ಮೇಲಿನಂತೆ ಪ್ರಶ್ನಿಸಿ ಕೇಳುತ್ತಾಳೆ ಅಂದರೆ ಇಲ್ಲಿ ಅಕ್ಕಮಹಾದೇವಿಯ ಭಕ್ತಿಯನ್ನು ನಾವು ಮೆಚ್ಚಲೇಬೇಕು ಏಕೆಂದರೆ ಹರನೇ ನನ್ನ ಗಂಡನಾಗಬೇಕೆಂದು ಅನಂತ ಕಾಲ ತಪಸ್ಸನ್ನು ಮಾಡಿದವಳು ಹಾಗೂ ಶಿವನಲ್ಲದೇ ಬೇರೊಂದನ್ನು ನೆನೆಯದವಳು ಅಕ್ಕಮಹಾದೇವಿ, ಹರನ ಭಕ್ತಿ ಭಾವ ಕುರಿತು ಈ ವಚನದಲ್ಲಿ ತಿಳಿಯಬಹುದು.

ಅಕ್ಕಮಹಾದೇವಿಯ ಇನ್ನೊಂದು ವಚನದಲ್ಲಿ ಭಕ್ತಿ ಕುರಿತು ಹೀಗೆ ತಿಳಿಯಬಹುದು.

**ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು!**
**ತೃಷೆಯಾದರೆ ಕೆರೆ-ಬಾವಿ-ಹಳ್ಳಂಗಳುಂಟು!**
**ಶಯನಕ್ಕೆ ಹಾಳು ದೇಗುಲವುಂಟು!**
**ಚೆನ್ನಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ ನೀನೆನಗುಂಟು!**

ಈ ವಚನದಲ್ಲಿ ಕೆಲವು ನಿದರ್ಶನಗಳ ಮೂಲಕ ತನಗೆ ಚೆನ್ನಮಲ್ಲಿಕಾರ್ಜುನ ಎಷ್ಟು ಅವಶ್ಯ ಹಾಗೂ ಆತನಲ್ಲಿ ತಾನು ಭಕ್ತಿಯಲ್ಲಿ ಲೀನವಾಗಿರುವ ಬಗ್ಗೆ ಹೇಳಿದ್ದನ್ನು ನೋಡಬಹುದು. ಹಸಿವಾದರೆ ಊರಿನೊಳಗೆ ಹೋಗಿ ಯಾರ ಮನೆಯಲ್ಲಿ ಬೇಕಾದರೂ ಭಿಕ್ಷೆ ಬೇಡಿ ಹಸಿವು ನೀಗಿಸಿಕೊಳ್ಳಬಹುದು. ಅದೇ ರೀತಿಯಾಗಿ ಬಾಯಾರಿಕೆ ಆದರೆ ಕೆರೆ-ಬಾವಿ-ಹಳ್ಳಗಳಲ್ಲಿ ನೀರು ಕುಡಿದು ಬಾಯಾರಿಕೆ ನಿವಾರಿಸಬಹುದು. ದೇಹ ಬಳಲಿದರೆ ಯಾವುದಾದರೂ ಹಾಳು ದೇವಾಲಯಗಳಲ್ಲಿ ಹೋಗಿ ವಿಶ್ರಾಂತಿ ತೆಗೆದುಕೊಳ್ಳಬಹುದು. ಆದರೆ ನನ್ನವನಾಗಿ ನನ್ನ ಆತ್ಮ ಸಂಗಾತಕ್ಕೆ ಚೆನ್ನಮಲ್ಲಿಕಾರ್ಜುನನೇ ಬೇಕು ಎಂದು ಹೇಳುವ ಮೂಲಕ ಶರಣ ಸತಿ-ಲಿಂಗಪತಿ ಎಂಬ ಧೋರಣೆಯನ್ನು ನಾವಿಲ್ಲಿ ತಿಳಿಯಬಹುದು.

**ಮುಕ್ತಾಯಕ್ಕ:**

ಶಿವಶರಣೆ ಮುಕ್ತಾಯಕ್ಕ ಗದಗ ಜಿಲ್ಲೆಯ ಲಕ್ಕುಂಡಿ ಗ್ರಾಮದವಳು. ಇವಳು ಶಿವಶರಣ ಅಜಗಣ್ಣನ ಸಹೋದರಿ, ಈಕೆಯ ಅಧ್ಯಾತ್ಮ ಗುರು ತಂದೆ ಎಲ್ಲವೂ ಅಣ್ಣನೇ ಆಗಿದ್ದನು. ಆದ್ದರಿಂದ ಈಕೆಯ ವಚನಗಳ ವಚನಾಂಕಿತವೂ ಅಜಗಣ್ಣ ತಂದೆ ಎಂದೇ ಆಗಿತ್ತು.

**ನುಡಿಯಲು ಬಾರದು ಕೆಟ್ಟ ನುಡಿಗಳ**
**ನಡೆಯಲು ಬಾರದು ಕೆಟ್ಟ ನಡೆಗಳ**
**ನುಡಿದಡೇನು ನುಡಿಯದಿರ್ದಡೇನು**
**ಹಿಡಿದ ವ್ರತ ಬಿಡದಿರಲು**
**ಅದೇ ಮಹಾ ಜ್ಞಾನದಾಚರಣೆ**
**ಎಂಬೆನು ಅಜಗಣ್ಣ ತಂದೆ.**

ಈ ವಚನದಲ್ಲಿ ವ್ಯಕ್ತಿಯು ತಾನು ಪಡೆದ ಅರಿವಿನಿಂದ ಕೆಟ್ಟ ನಡೆನುಡಿಗಳನ್ನು ತೊರೆದು, ಒಳ್ಳೆಯವನಾಗಿ ಬಾಳುವುದೇ ಎಲ್ಲಕ್ಕಿಂತಲೂ ದೊಡ್ಡದು ಎಂಬ ಸಂಗತಿಯನ್ನು ತಿಳಿಸುತ್ತದೆ. ಒಬ್ಬರ ಮನಸ್ಸಿಗೆ ನೋವಾಗುವ ಹಾಗೆ ಮಾತನಾಡಬಾರದು ಹಾಗೂ ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಹಾಗೆ ನಡೆದುಕೊಳ್ಳಬಾರದು. ಮಾತನಾಡಿದರೇನು ಮಾತನಾಡದಿದ್ದರೇನು ದೊಡ್ಡ ಸಂಗತಿಯಲ್ಲ. ನಿತ್ಯ ಜೀವನದಲ್ಲಿ ವ್ಯಕ್ತಿಯು ಇತರರೊಂದಿಗೆ ಪ್ರೀತಿ, ಕರುಣೆ, ಗೆಳೆತನದಿಂದ ನಡೆದುಕೊಳ್ಳಬೇಕು. ಹಿಡಿದ ವ್ರತವನ್ನು ಬಿಡಬಾರದು, ಅಂದರೆ ದೇವರಿಗೆ

ಪೂಜೆ ಉಪವಾಸದ ವಿಧಾನಗಳನ್ನು ಅನುಸರಿಸಿದರೆ ಅದುವೇ ಜ್ಞಾನದ ಆಚರಣೆಯಾಗುತ್ತದೆ ಎಂದು ಮುಕ್ತಾಯಕ್ಕ ಹೇಳಿದಳು. ಅರಿವು ಎಂಬುದು ನಿತ್ಯ ಜೀವನದಲ್ಲಿ ಆಚರಣೆಗೆ ಬಂದಾಗಲೇ ಅದಕ್ಕೆ ಬೆಲೆ ಬರುತ್ತದೆ ಎಂಬ ನಿಲುವನ್ನು ತಿಳಿಸುತ್ತದೆ.

**ನೀಲಮ್ಮ:**

ಬಸವಣ್ಣನವರ ಮಡದಿ ನೀಲಾಂಬಿಕೆಯೇ ನೀಲಮ್ಮ ಎಂದು ಕರೆದಿದ್ದಾರೆ. ಬಸವಣ್ಣನವರ ದಾರಿಯಲ್ಲಿಯೇ ಮಡದಿ ನೀಲಮ್ಮ ಸಾಗಿಬಂದಿದ್ದಾಳೆ. ವಚನಗಳನ್ನು ರಚಿಸಿ ಸಮಾಜದಲ್ಲಿನ ಜನರಿಗೆ ಶರಣ ವಿಚಾರಗಳನ್ನು ತಿಳಿಸಿದ್ದಾಳೆ.

**ಎನಗೆ ಇಲ್ಲಿ ಏನು ಬಸವ ಬಸವಾ?**
**ಎನಗೆ ಅದರ ಕುರುಹೇನು ಬಸವಾ**
**ಎನಗೆ ಬಸವ ನಡೆದ ಭಕ್ತಿ ಸ್ಥಲದಲ್ಲಿ ನಿಂದು**
**ಭಕ್ತಿ ಸ್ಥಲ ಬಸವನಲ್ಲಿ ಕುರುಹಳಿದು**
**ನಾನು ಬಸವನ ಶ್ರೀಪಾದದಲ್ಲಿ**
**ಉರಿಯುಂಡು ಕರ್ಪೂರದಂತಡಗಿದ ಬಳಿಕ ಸಂಗಯ್ಯ**

ಈ ವಚನದಲ್ಲಿ ನೀಲಮ್ಮಳ ಸಮರ್ಪಣಾ ಭಾವವನ್ನು ಗುರುತಿಸಬಹುದು. ಬಸವಣ್ಣನವರು ನಡೆದ ಮಾರ್ಗದಲ್ಲಿ ಕ್ರಮಿಸುವ ಹಂಬಲವು ನೀಲಾಂಬಿಕೆಯ ಪರಮ ಉದ್ದೇಶವಾಗಿತ್ತು ಭಕ್ತಿಯ ಪ್ರತಿರೂಪವೇ ಬಸವಣ್ಣನವರು. ಅದನ್ನೇ ನೀಲಾಂಬಿಕೆ "ಭಕ್ತಿಸ್ಥಲ ಬಸವನಲ್ಲಿ ಕುರುಹಳಿದುದು" ಎಂದು ಪ್ರತಿಪಾದಿಸುತ್ತಾಳೆ. ಭಕ್ತಿ ಮಾರ್ಗದಲ್ಲಿ ನಡೆದ ಬಸವನ ಶ್ರೀ ಪಾದದಲ್ಲಿ ಉರಿಯುಂಡ ಕರ್ಪೂರದಂತೆ ಅಡಗಿದೆನು ಎಂದು ಸತಿಯಾಗಿ ಬಸವಣ್ಣನವರ ಅನುಯಾಯಿ ಆಗಿ ಬಸವಣ್ಣನವರಿಗೆ ನೆರಳಾದಳು ಈ ನೀಲಮ್ಮ.

**ಲಿಂಗಮ್ಮ:**

ಶಿವಶರಣ ಹಡಪದ ಅಪ್ಪಣ್ಣನ ಹೆಂಡತಿ ಲಿಂಗಮ್ಮ, ಲಿಂಗಮ್ಮಳು ಶಿವಶರಣೆಯಾಗಿ ಹಲವಾರು ವಚನಗಳನ್ನು ಬರೆದಿದ್ದಾರೆ ಅದರಲ್ಲಿ ಒಂದನ್ನು ಉದಾಹರಣೆಯಾಗಿ ನೋಡಬಹುದು.

**ಮದ ಮತ್ಸರ ಬಿಡದು**
**ಮನದ ಕನಲು ನಿಲ್ಲದು**
**ಒಡಲ ಗುಣ ಹಿಂಗದು**
**ಇವ ಮೂರನು ಬಿಡದೆ**
**ನಡೆಸುವನ್ನಕ್ಕ ಘನವ ಕಾಣಬಾರದು**
**ಘನವಕಾಂಬುದಕ್ಕೆ**
**ಮದಮತ್ಸರವನೆ ಬಿಟ್ಟು**
**ಮನದ ಕನಲನೆ ನಿಲಿಸಿ**
**ಒಡಲ ಗುಣ ಹಿಂಗಿ**
**ತಾ ಮೃಡರೂಪಾದಲ್ಲದೆ**
**ಘನವ ಕಾಣಬಾರದೆಂದರು**
**ನಮ್ಮ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ.**

ಈ ವಚನದಲ್ಲಿ ವ್ಯಕ್ತಿಗಳು ಮೈಮನಗಳಲ್ಲಿ ಯಾವಾಗಲೂ ತುಡಿಯುತ್ತಿರುವ ಒಳಿತು ಕೆಡುಕಿನ ವಿಚಾರದಲ್ಲಿ ಕೆಟ್ಟದ್ದನ್ನು ಹತ್ತಿಕ್ಕಿಕೊಂಡು, ನಿತ್ಯ ಜೀವನದಲ್ಲಿ ಒಳ್ಳೆಯ ನಡೆನುಡಿಗಳಿಂದ ಬಾಳಿದಾಗ ಮಾತ್ರ ಅವನ ಬದುಕು ಉತ್ತಮವಾಗಿ ರೂಪುಗೊಳ್ಳುತ್ತದೆ. ವ್ಯಕ್ತಿಯ ವ್ಯಕ್ತಿತ್ವ ಉತ್ತಮವಾಗಿದ್ದರೆ ಶಿವನನ್ನು ಕಾಣಬಹುದು. ಕೆಟ್ಟ ನಡೆನುಡಿಯುಳ್ಳವರಿಗೆ ಶಿವನು ಒಲಿಯುವುದಿಲ್ಲ ಎಂದು ಈ ವಚನದಲ್ಲಿ ತಿಳಿಯಬಹುದು.

**ಆಯ್ದಕ್ಕಿ ಲಕ್ಕಮ್ಮ:**

ಶಿವಶರಣ ಆಯ್ದಕ್ಕಿ ಮಾರಯ್ಯನ ಹೆಂಡತಿ ಆಯ್ದಕ್ಕಿ ಲಕ್ಕಮ್ಮ ''ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ'' ವಚನಾಂಕಿತವಾಗಿದೆ.

**ಆಸೆಯೆಂಬುದು ಅರಸಂಗಲ್ಲದೆ**
**ಶಿವಭಕ್ತರಿಗುಂಟೆ ಅಯ್ಯಾ**
**ರೋಷವೆಂಬುದು ಯಮದೂತರಿಗಲ್ಲದೆ**
**ಅಜಾತರಿಗುಂಟೆ ಅಯ್ಯಾ**
**ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ**
**ಮಾರಯ್ಯ ಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯ**

ಈ ವಚನದಲ್ಲಿ ಆಸೆ ಅರಸರಿಗೆ ಹೊರತು ಶಿವಭಕ್ತರಿಗೆ ಇರಬಾರದು ಸಿಟ್ಟು ಆಕ್ರೋಶ, ಕೋಪ ಯಮದೂತರಿಗೆ ಇರುವ ಗುಣಗಳು ಆದರೆ ಶಿವಭಕ್ತನಿಗಲ್ಲ. ಎಷ್ಟೊಂದು ಅಕ್ಕಿಕಾಳನ್ನು ಆರಿಸಿಕೊಂಡು ಬಂದಿದ್ದೀರಿ ಇದು ಸರಿಯಲ್ಲ ಎಂದು ಹೇಳುತ್ತಾಳೆ. ಇದನ್ನು ಶಿವ ಒಪ್ಪುವುದಿಲ್ಲವೆಂದು ಆಯ್ದಕ್ಕಿ ಲಕ್ಕಮ್ಮ ತನ್ನ ಗಂಡನಿಗೆ ಹೇಳುತ್ತಾಳೆ. ಅಂದರೆ ದಾಸೋಹಕ್ಕೆ ಬೇಕಾಗಿರುವುದಕ್ಕಿಂತ ಹೆಚ್ಚಾಗಿ ಅಕ್ಕಿಯನ್ನು ಆಯ್ದುಕೊಂಡು ತಂದಿರುವ ಅಕ್ಕಿಯ ದೊಡ್ಡ ಗಂಟನ್ನು ಕಂಡು ಅಚ್ಚರಿ ಹಾಗೂ ಆತಂಕದಿಂದ ಲಕ್ಕಮ್ಮಳು ತನ್ನ ಗಂಡ ಮಾರಯ್ಯನಿಗೆ ಶಿವಶರಣರಾದವರು ಈ ಬಗೆಯ ಆಸೆಗೆ ಸೆಳೆತಕ್ಕೆ ಒಳಗಾಗಬಾರದು ಎಂಬ ಎಚ್ಚರಿಕೆಯನ್ನು ಇಲ್ಲಿ ನೀಡಿದ್ದಾಳೆ.

**ಅಮುಗೆ ರಾಯಮ್ಮ:**

ಶಿವಶರಣೆ ಅಮುಗೆ ರಾಯಮ್ಮಳು ''ಅಮುಗೇಶ್ವರ ಲಿಂಗ'' ವಚನಾಂಕಿತದೊಂದಿಗೆ ವಚನಗಳನ್ನು ರಚಿಸಿದ್ದಾಳೆ.

**''ಕಾವಿ ಕಾಷಾಂಬರವ ಹೊದ್ದು ಕಾಮವಿಹಾರಕ್ಕೆ ತಿರುಗುವ**
**ಕರ್ಮಿಗಳ ಮುಖವ ನೋಡಲಾಗದು**
**ಜಂಗಮವಾಗಿ ಜಗದಿಚ್ಛೆಯ ನುಡಿವ**
**ಜಂಗುಳಿಗಳ ಮುಖವ ನೋಡಲಾಗದು**
**ಲಿಂಗೈಕ್ಯರೆನಿಸಿಕೊಂಡು ಅಂಗವಿಕಾರಕ್ಕೆ ತಿರುಗುವ**
**ಲಿಂಗದ್ರೋಹಿಗಳ ಮುಖವ ನೋಡಲಾಗದು**
**ಕಾಣಾ ಅಮುಗೇಶ್ವರ ಲಿಂಗವೆ''**

ಈ ವಚನದಲ್ಲಿ ಸರ್ವಸಂಗ ಪರಿತ್ಯಾಗಿಗಳಂತೆ ಉಡುತೊಡುಗೆಯನ್ನು ತೊಟ್ಟು ನಯವಾದ ನಡೆನುಡಿಗಳಿಂದ ಜನ ಸಮುದಾಯವನ್ನು ಮರಳುಗೊಳಿಸುತ್ತ, ಒಳಗೊಳಗೆ ಅಂದರೆ ಜನರ ಕಾಣಿಗೆ ಕಾಣದಂತೆ ಕೆಟ್ಟ ಕೆಲಸಗಳಲ್ಲಿ ತೊಡಗಿರುವಂತಹ ವಂಚಕರ

ಜೊತೆಯಲ್ಲಿ ಯಾವುದೇ ಬಗೆಯ ಒಡನಾಟವನ್ನು ಇಟ್ಟುಕೊಳ್ಳಬಾರದು ಎಂಬುದನ್ನು ತಿಳಿಸಲಾಗಿದೆ. ಇದು ಇಂದಿನ ಕಾಲಕ್ಕೂ ಪ್ರಸ್ತುತವೆನಿಸಿದೆ ಎಂದರೆ ತಪ್ಪಾಗಲಾರದು.

ಹೀಗೆ ಇನ್ನೂ ಅನೇಕ ಶಿವಶರಣೆಯರ ವಚನಗಳನ್ನು ನಾವು ನೋಡಬಹುದು. ಇಲ್ಲಿ ಕೆಲವೇ ಕೆಲವು ಶಿವಶರಣೆಯರ ವಚನಗಳನ್ನು ಆಯ್ದುಕೊಂಡು ನನ್ನ ಲೇಖನವನ್ನು ರಚಿಸಿದ್ದೇನೆ.

ಒಟ್ಟಾರೆಯಾಗಿ ಶಿವಶರಣರ ಜೊತೆಗೂಡಿ ಶಿವಶರಣೆಯರು ವಚನಗಳ ಮೂಲಕ ಜನವಾಣಿಯನ್ನು ದೇವವಾಣಿಯನ್ನಾಗಿಸಿ ನಮ್ಮ ವಚನಕಾರ್ತಿಯರು ಸಮಾಜದ ಸಮಾನತೆಯ ಹರಿಕಾರರು ಅದರಲ್ಲೂ ಭಕ್ತಿ ಕಾಯಕ– ದಾಸೋಹದ ಜೊತೆಗೆ ಆಧ್ಯಾತ್ಮಿಕತೆಯ ಪ್ರತಿಪಾದಕರಾಗಿ ವಚನ ಸಾಹಿತ್ಯಕ್ಕೆ ತಮ್ಮದೇಯಾದ ಕೊಡುಗೆಗಳನ್ನು ನೀಡಿದ್ದಾರೆ. ಮಾನವೀಯ ಮೌಲ್ಯಗಳ ಜೊತೆಗೆ ವಿಶೇಷವಾಗಿ ಸ್ತ್ರೀಯರಿಗೆ ಸ್ವಾತಂತ್ರ್ಯ ನೀಡುವಲ್ಲಿ ವಚನ ಸಾಹಿತ್ಯದಯುಗ ಪ್ರಮುಖವಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯ ಕಾಲದಲ್ಲಿ ಸ್ತ್ರೀಯರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟು ಮಹಿಳೆಯರಿಗೆ ಗೌರವಾದರಗಳು ಸಿಗುವ ಹಾಗೆ ಮಾಡಿದ್ದು ಚರಿತ್ರೆಯಲ್ಲಿ ವಚನ ಸಾಹಿತ್ಯದ ಕಾಲದಲ್ಲಿ ಎಂದರೆ ತಪ್ಪಾಗಲಾರದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯದ ಯುಗ ಸುವರ್ಣಯುಗವಾಗಿತ್ತು ಎಂದರೆ ಒಪ್ಪಲೇಬೇಕು ಏಕೆಂದರೆ ವಿಶ್ವ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯದ ಕಾಣಿಕೆಯೆಂದರೆ ಅದು ನಮ್ಮ ಶಿವಶರಣರ ಶಿವಶರಣೆಯರ ವಚನ ಸಾಹಿತ್ಯವೇ ಎನ್ನಬಹುದು.

"ನುಡಿದಂತೆ ನಡೆದವರು – ನಡೆದಂತೆ ನುಡಿದವರು" ಈ ಜಗತ್ತಿನಲ್ಲಿ ಯಾರಾದರೂ ಇದ್ದರೆ ಅವರೇ ನಮ್ಮ ವಚನ ಸಾಹಿತ್ಯದ ಶಿವಶರಣರು ಹಾಗೂ ಶಿವಶರಣೆಯರು. ಇವರು ಬಿಟ್ಟು ಹೋದ ಅದ್ಭುತವಾದ ವಚನ ಸಾಹಿತ್ಯವನ್ನು ಅಧ್ಯಯನ ಮಾಡುತ್ತ ಮುಂದಿನ ಜನಾಂಗಕ್ಕೂ ಇನ್ನೂ ಹೆಚ್ಚಿನ ಮಟ್ಟದಲ್ಲಿ ತಿಳಿಸುವಂತಹ ಪ್ರಯತ್ನದಲ್ಲಿ ನಾವು ಸಾಗಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಮರುಳಸಿದ್ದಪ್ಪ ಕೆ. ಮತ್ತು ನಾಗರಾಜ ಕಿ.ರಂ. (ಸಂ.), (1980), ವಚನ ಕಮ್ಮಟ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
2. ಬಸವರಾಜು ಎಲ್., (1966), ಅಕ್ಕನ ವಚನಗಳು, ಮೈಸೂರು: ಗೀತಾ ಬುಕ್ ಹೌಸ್.
3. ಭೂಸನೂರಮಠ ಸಂ.ಶಿ. (ಸಂ.), (1969), ವಚನ ಸಾಹಿತ್ಯ ಸಂಗ್ರಹ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
4. ಶ್ರೀನಿವಾಸಮೂರ್ತಿ ಎಂ.ಆರ್., (1931), ವಚನ ಧರ್ಮಸಾರ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
5. ವೀರಣ್ಣ ರಾಜೂರು (ಸಂ.), (2001), ಶಿವಶರಣೆಯ ವಚನ ಸಂಪುಟ – 5, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
6. ಚಿದಾನಂದಮೂರ್ತಿ ಎಂ., (1975), ವಚನ ಸಾಹಿತ್ಯ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.